# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ 65 ಯುಜಿಸಿ ಬಾಬಿ ಆಯವ್ಯಯ 2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 23-08-2016

## ಸುತ್ತೋಲೆ

**ವಿಷಯ: ಯುಜಿಸಿ 6ನೇ ವೇತನ ಆಯೋಗ ಜಾರಿ ಮಾಡಿದ ವೇತನ ಶ್ರೇಣಿಯ ಹಿಂಬಾಕಿಯನ್ನು ಕಛೇರಿ/ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಪಾವತಿಸುವ ಬಗ್ಗೆ.**

**ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ:480:ಯುಎನ್ಇ:2014,ಬೆಂಗಳೂರು, ದಿನಾಂಕ:07/06/2016 ಮತ್ತು ದಿ:09/08/2016.**

**2) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ:65: ಆಯವ್ಯಯ:2013-14(15-16) ಭಾಗ-2 ಐ, ದಿನಾಂಕ:23/01/2016.**

**3) ಸರ್ಕಾರದ ಆದೇಶ ಸಂಖ್ಯೆ:ಇಡಿ:37:ಯುಎನ್ಇ:2009,ಬೆಂಗಳೂರು ದಿನಾಂಕ:24-12-2009.**

**4) ಅಧಿಸೂಚನೆ ಸಂಖ್ಯೆ:ಸಂವ್ಯಾಶಾಇ:60:ಶಾಸನ 2013, ಬೆಂಗಳೂರು, ದಿ:12-02-2014**

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ 2006ರ ಪರಿಷ್ಕೃತ ಯುಜಿಸಿ ವೇತನ ಬಾಕಿ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಉಪನ್ಯಾಸಕರುಗಳಿಗೆ ಸಮಾನವಾಗಿ ಪಾವತಿಸುವಂತೆ ತಿಳಿಸಲಾಗಿರುತ್ತದೆ. ಅಲ್ಲದೆ, ಸದರಿ ಆದೇಶದಲ್ಲಿ **"ದಿನಾಂಕ:01/01/2006 ರವರೆಗೆ ಇರುವ ಹುದ್ದೆಗಳಿಗೆ ಮಾತ್ರ ಹಿಂಬಾಕಿ ಮೊತ್ತವನ್ನು ನೀಡಬೇಕಾಗಿರುತ್ತದೆ.ಅಂದರೆ, ದಿನಾಂಕ:01/01/2006 ರಿಂದ 31/03/2010ರ ಅವಧಿಯಲ್ಲಿ ನೇಮಕಗೊಂಡ ಬೋಧಕ ಸಿಬ್ಬಂದಿಗಳು ಹಿಂಬಾಕಿ ಮೊತ್ತವನ್ನು ಪಡೆಯಲು ಅವಕಾಶವಿರುವುದಿಲ್ಲ. ಆದುದರಿಂದ, ಪ್ರಸ್ತುತ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂದಿಸಿದವರಿಗೆ ಪಾವತಿಸುವಾಗ ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು".** ಎಂಬುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಪರಿಷ್ಕೃತ 2006ರ ಯುಜಿಸಿ ಹಿಂಬಾಕಿಯನ್ನು **ದಿನಾಂಕ:01-01-2006ರೊಳಗೆ ನೇಮಕಾತಿ ಹೊಂದಿದ ಅರ್ಹ ಬೋಧಕ ಸಿಬ್ಬಂದಿಗಳಿಗೆ ನಿಯಮಾನುಸಾರ ಪರಿಶೀಲಿಸಿ ಅದರಂತೆ ಮಾತ್ರ ಸದರಿಯವರುಗಳಿಗೆ ಈ ಹಿಂದೆ ಉಲ್ಲೇಖ (2)ರಲ್ಲಿ ಪಾವತಿಸಲಾದ ದಿನಾಂಕದಿಂದ ಮುಂದಿನ 08 ತಿಂಗಳುಗಳ ಬಾಕಿಯನ್ನು ಮಾತ್ರ ಪಾವತಿ ಮಾಡಲು ಸೂಚಿಸಿದೆ.**

ಕೇಂದ್ರ ಕಛೇರಿ / ಪ್ರಾದೇಶಿಕ ಕಛೇರಿ / ಯೋಜನೆ / ಯೋಜನೇತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ಪಾವತಿಸುವ ಮುನ್ನ ಈಗಾಗಲೇ ಪಾವತಿಯಾಗಿದ್ದಲ್ಲಿ ಸದರಿ ಮೊತ್ತವನ್ನು ಹೊರತುಪಡಿಸಿ ಹಾಗೂ ಹೆಚ್ಚುವರಿ ಪಾವತಿಯಾಗಿದ್ದಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸಿ, ಕ್ಲೈಮ್ ಮಾಡಲಾಗುವ ಅವಧಿಗೆ ಈ ಹಿಂದೆ ಪಾವತಿಯಾಗದಿರುವುದನ್ನು ನಿಯಮಾನುಸಾರ ಪರಿಶೀಲಿಸಿ ಖಚಿತಪಡಿಸಿಕೊಂಡು ವಿಳಂಬ ಮಾಡದೆ ಪಾವತಿ ಮಾಡಲು ತಿಳಿಸಲಾಗಿದೆ.

| ಕ್ರ. ಸಂ | ಕಛೇರಿ/ಕಾಲೇಜು | ಲೆಕ್ಕ ಶೀರ್ಷಿಕೆ/ ಉಪಲೆಕ್ಕ ಶೀರ್ಷಿಕೆ | ಹಂಚಿಕೆಯಾಗಿರುವ ಅನುದಾನ(ರೂ.ಲಕ್ಷಗಳಲ್ಲಿ) |
|---|---|---|---|
| 1 | ಕೇಂದ್ರ ಕಛೇರಿ/ಪ್ರಾದೇಶಿಕ ಕಛೇರಿ ಹಾಗೂ ಯೋಜನೆ/ ಯೋಜನೇತರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು | 2202-03-103-2-01-002 (ಯೋಜನೇತರ) | 3350.00 |

ಸದರಿ ಅನುದಾನವನ್ನು ಬಿಡುಗಡೆ ಮಾಡುವಾಗ ಕಾಲಕಾಲಕ್ಕೆ ಸರ್ಕಾರದಿಂದ/ಇಲಾಖೆಯಿಂದ ಹೊರಡಿಸುವ ಆದೇಶ/ಸುತ್ತೋಲೆಗಳನ್ವಯ ನಿಯಮಾನುಸಾರ ಪಾವತಿಸಲು ತಿಳಿಸಿದೆ. ಈ ಅನುದಾನ ಬಿಡುಗಡೆ ಸಂಬಂಧ ಯಾವುದಾದರೂ ತಪ್ಪಾಗಿ ಪಾವತಿಯಾದಲ್ಲಿ, ಪ್ರಾದೇಶಿಕ ಕಛೇರಿಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಜಂಟಿ ನಿರ್ದೇಶಕರು ಹಾಗೂ ಕಾಲೇಜುಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಪ್ರಾಂಶುಪಾಲರುಗಳು ನೇರ ಹೊಣೆಗಾರರಾಗಿರುತ್ತಾರೆ. ಸದರಿ ಬಾಕಿ ಪಾವತಿಸಿರುವ ಸಂಬಂಧ ಸಿಬ್ಬಂದಿವಾರು ಹಾಗೂ ಸದರಿಯವರಿಯವರುಗಳಿಗೆ ಮಾಹೆವಾರು ಪಾವತಿಯಾದ ಪಟ್ಟಿಯೊಂದಿಗೆ ದೃಢೀಕರಿಸಿ ಪ್ರತ್ಯೇಕ **"ಬಳಕೆ ಪ್ರಮಾಣ ಪತ್ರ"**ವನ್ನು ಪಾವತಿಯಾದ ಕೂಡಲೇ ಸಲ್ಲಿಸಲು ಸೂಚಿಸಿದೆ ಹಾಗೂ ಪ್ರಸ್ತುತ ಬಿಡುಗಡೆ ಮಾಡಿರುವ ಅನುದಾನವು ವಿಶೇಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

---2

ಸದರಿ ಮೊತ್ತದಲ್ಲಿ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಹೊರತುಪಡಿಸಿ ಪಾವತಿಸಲು ಸೂಚಿಸಿದೆ. ಯೋಜನಾ ಕಾಲೇಜುಗಳಾಗಲೀ ಅಥವಾ ಯೋಜನೇತರ ಕಾಲೇಜುಗಳಾಗಲೀ ಈ ಸಂಬಂಧ ಅನುದಾನ ಕೋರಿ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸದೇ, ಈಗಾಗಲೇ ಮೇಲ್ಕಂಡಂತೆ ತಿಳಿಸಲಾಗಿರುವ ಲೆಕ್ಕಶೀರ್ಷಿಕೆಗೆ ಹಂಚಿಕೆ ಮಾಡಲಾಗಿರುವ ಅನುದಾನಕ್ಕೆ, ಸಂಬಂಧಿತ ಜಂಟಿ ನಿರ್ದೇಶಕರು/ಲೆಕ್ಕಾಧಿಕಾರಿಗಳು/ಪ್ರಾಂಶುಪಾಲರುಗಳ ಹಂತದಲ್ಲಿಯೇ ತಮ್ಮ ತಮ್ಮ ಕಛೇರಿ/ಕಾಲೇಜುಗಳ ಉಪನ್ಯಾಸಕರುಗಳ ಹಿಂಬಾಕಿ ಬಿಲ್ಲುಗಳನ್ನು ಸಿದ್ಧಪಡಿಸಿ ನೇರವಾಗಿ ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸಿ ಕ್ಲೈಮ್ ಮಾಡಲು ಸೂಚಿಸಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)**

ಕಾಲೇಜು ಶಿಕ್ಷಣ ನಿರ್ದೇಶಕರು(ಪ್ರಭಾರ)

**ಇವರಿಗೆ:**

1) ಕೇಂದ್ರ ಕಛೇರಿ ಹಾಗೂ ಆರು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಕಾರ್ಯನಿರ್ವಹಿಸಿರುವ/ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಯುಜಿಸಿ ಬಾಕಿಯನ್ನು ಮೇಲೆ ತಿಳಿಸಿರುವ ಲೆಕ್ಕಶೀರ್ಷಿಕೆಯಡಿಯಲ್ಲಿಯೇ ಭರಿಸಲು ತಿಳಿಸಿದೆ-ಕೇಂದ್ರ ಕಛೇರಿ ಹಾಗೂ ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರು/ ಲೆಕ್ಕಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ,
2) ಎಲ್ಲಾ ಯೋಜನೇತರ ಹಾಗೂ ಯೋಜನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮೇಲ್ಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪಾವತಿಸಲು ಸೂಚಿಸಲಾಗಿದೆ.
3) ಲೆಕ್ಕಾಧಿಕಾರಿಗಳು, ಲೆಕ್ಕ ತಪಾಸಣಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಿರುವ ಬಗ್ಗೆ ವಿಶೇಷ ಲೆಕ್ಕ ತಪಾಸಣೆ ನಡೆಸಿ, ವರದಿಯನ್ನು ಮಾನ್ಯ ಆಯುಕ್ತರಿಗೆ ಸಲ್ಲಿಸಲು ಸೂಚಿಸಿದೆ.
4) **ಮಾಹಿತಿ ಅಧಿಕಾರಿಗಳು**: ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
5) ಕಛೇರಿ ಪ್ರತಿ.